

ಹೊಡೆಯುತ್ತಿಲ್ಲ; ಸೈಕಲ್ಲೇ ಜನರ ಬದುಕನ್ನು ನಡೆಸುತ್ತಿದೆ' ಎಂದು ಅನಿಸುವುದು.

ಆದರೆ ಜನ ಸದಾ ದುಡಿಮೆಯಲ್ಲೇ ಮುಳುಗಿರುವುದಿಲ್ಲ. ಅವರಿಗೆ ರಂಜನೆ, ಉಲ್ಲಾಸಬೇಕು. ಬಿಡುಗಡೆ ಬೇಕು. ಸೈಕಲ್ಲಿನಲ್ಲಿ ದೇಶಸುತ್ತುವ ಸಾಹಸಿಗಳು ಹುಟ್ಟಿದ್ದು ಹೀಗೆ. ನನ್ನ ಪರಿಚಿತ ಗೆಳೆಯನೊಬ್ಬನಿಗೆ ಸೈಕ್ಲಿಂಗ್ ಹುಚ್ಚಿದೆ. ಆತ ಕನ್ಯಾಕುಮಾರಿ, ಪಣಜಿ, ಪಂಡರಾಪುರ, ಗೋಕರ್ಣ ಎಲ್ಲ ಸುತ್ತಿದ್ದಾನೆ. ಹಂಪಿಗೆ ಈಗಲೂ ಶ್ರಾವಣ ಮಾಸದಲ್ಲಿ ವಿಜಯಪುರ ಭಾಗದಿಂದ ರೈತಾಪಿ ಹುಡುಗರು ಸೈಕಲ್ಲಿಗೆ ಝಂಡಾ ಕಟ್ಟಿಕೊಂಡು ಬುತ್ತಿಗಂಟು ಹಿಂದಿಕ್ಕಿಕೊಂಡು ಬರುವುದುಂಟು. ವಿದೇಶಿಗರಂತೂ ಹಂಪಿಗೆ ಇಳಿದವರೇ ಸೈಕಲೊಂದನ್ನು ಹಂಡಿಗೆ ಸಿಕ್ಕಿಸಿಕೊಂಡು ಎಲ್ಲಿ ಬೇಕಲ್ಲಿ ಅಲೆವರು. ಈ ಹೊತ್ತಲ್ಲಿ ನಮ್ಮೂರಿನ ಜೇನುಪುಟ್ಟ ನೆನಪಾಗುತ್ತಿದ್ದಾನೆ. ಹೆಂಡತಿ ಮಕ್ಕಳಿಲ್ಲದ ಅವನು ಮಸಿಕೊಳ್ಳಿಯಂತೆ ಒಂಟಿಯಾಗಿ ಬದುಕಿದವನು. ಸೈಕಲ್ಲು, ಮರಹತ್ತಲು ಬೇಕಾದ ಸರವಿ, ತುಪ್ಪ ಸಂಗ್ರಹಿಸಲು ಟಿನ್ನಿನ ಡಬ್ಬ ಇಷ್ಟೇ ಅವನ ಸಂಪತ್ತು. ಆತ ಮುಗಿಲೆತ್ತರದ ಮರಗಳನ್ನು ಹತ್ತಿ ಜೇನುಕೀಳುತ್ತಿದ್ದನು; ಕೆಲಸಕ್ಕೆ ರಜೆ ಮಾಡಿದ ದಿನಗಳಲ್ಲಿ ತಲೆಯಮೇಲೆ ಖಾಲಿಬಾಟಲಿ ಇಟ್ಟುಕೊಂಡು ಕೆಮ್ಮಣ್ಣುಗುಂಡಿ ರಸ್ತೆಯ ಇಳಿಜಾರಿನಲ್ಲಿ ಸೈಕಲನ್ನು ಕೈಬಿಟ್ಟು ಓಡಿಸುತ್ತಿದ್ದನು. ಸೈಕಲ್ಲಿಗೂ ಸುಪ್ತ ಪ್ರತಿಭೆಯ ಪ್ರಕಟಣೆಗೂ ಯಾವ ಗುಪ್ತಸಂಬಂಧವಿದೆಯೊ ಕಾಣೆ. ತೇಜಸ್ವಿಯವರಿಗೆ ಕತೆಗಳಲ್ಲಿ ನಿಗೂಢತೆ ಬೆನ್ನುಹತ್ತಿಹೋಗುವ ಪ್ರತಿಭೆ ಮೊಳೆತಿದ್ದೇ ದಡೂತಿ ಹೆಂಗಸೊಬ್ಬಳಿಗೆ ಸೈಕಲ್ ಡಿಕ್ಕಿಸಿ ಮಡಿಲೊಳಗೆ ಬಿದ್ದಮೇಲೆ ತಾನೇ?

ವಿವಿಧ ಮಾದರಿಯ ಸೈಕಲುಗಳನ್ನೂ, ಅವನ್ನು ಮಂದಿ ಸಹಸ್ರಾರು ಉದ್ದೇಶದಲ್ಲಿ ಬಳಸುವುದನ್ನೂ, ಅವು ಎತ್ತುವ ಬಗೆಬಗೆಯ ಅವತಾರಗಳನ್ನೂ ಕಾಣುವಾಗ ವಿಸ್ಮಯವಾಗುತ್ತದೆ. ಸೈಕಲ್ ಚರಿತ್ರೆಯು ನಾಗರಿಕತೆಯ ವಿಕಾಸದ ಕಥನದಲ್ಲಿ ಒಂದು ಅರ್ಥಪೂರ್ಣ ಕೊಂಡಿ. ಜೀವವಿಕಾಸದ ಹಾದಿಯಲ್ಲಿ ಆಳಿಕೆ ಮಾಡಿದ ಡೈನೋಸರ್‌ಗಳು ಅಳಿದವು. ಆದರೆ ಸ್ವರ್ಗಚ್ಯುತರಾದ ಆಡಮ್‌ಈವರಂತೆ ಸೈಕಲ್ಲು, ಪ್ರತಿಷ್ಠಿತ ರಸ್ತೆಗಳಿಂದ ಹೊರದಬ್ಬಲ್ಪಟ್ಟರೂ ಅಳಿಯಲಿಲ್ಲ. ಫೀನಿಕ್ಸನಂತೆ ತನ್ನ ಬೂದಿಯಿಂದ ಮತ್ತೆ ಹುಟ್ಟಿತು. ಈಚೆಗೆ ಅದಕ್ಕೆ ಘನತೆ ಮರಳಿಬರುತ್ತಿದೆ. ತೈಲರುಣದಲ್ಲಿ ಜೀವ ಹಿಡಿದುಕೊಂಡಿರುವ ವಾಹನಗಳಿಗೆ